## ಶಾರದೆ ಒಲಿದಿದ್ದು ಹೇಗೆ?

ಮಗಳು ನಿಖಿತಾ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗ ವಾರಕ್ಕೊಮ್ಮೆ ಸಂಗೀತ ಕ್ಲಾಸಿಗೆ ಹೋಗುತ್ತಿದ್ದಳು. ಕೆಲವಾರಗಳ ತರುವಾಯ ಸಂಗೀತದ ಪ್ರಾಥಮಿಕ ಪಾಠಗಳನ್ನು ಪೂರೈಸಿದ ಸಂಗೀತ ಶಿಕ್ಷಕರು, 'ಸಂಗೀತ ಶಾರದೆಯನ್ನು ಒಲಿಸಿಕೊಳ್ಳಬೇಕು ಎಂದರೆ ಕಠಿಣ ಪರಿಶ್ರಮ ಹಾಕಬೇಕು. ಶ್ರದ್ಧೆ ಬಹಳ ಮುಖ್ಯ' ಎಂದು ಹೇಳಿದ್ದರಂತೆ. ಮಗಳು ಮನೆಗೆ ಬಂದವಳೇ ಅಜ್ಜನ ಬಳಿ ರಾಗ–ತಾಳಗಳ ಬಗ್ಗೆ ಪ್ರಶ್ನೆ ಹಾಕಿದಳು. ಅಜ್ಜ, 'ಇಲ್ಲ ಪುಟ್ಟಿ, ನನಗೆ ನಿಜವಾಗ್ಲೂ ಸಂಗೀತದ ಬಗ್ಗೆ ತಿಳಿದಿಲ್ಲ' ಎಂದರು. 'ಸಂಗೀತ ಕಲಿಯದೆ ಈ ಶಾರದೆಯನ್ನು ಹೇಗೆ ಒಲಿಸಿಕೊಂಡಿರಿ?' ಎಂದು ಅಜ್ಜಿಯತ್ತ ತೋರಿಸಿ ಕೇಳಿದಳು. ಅಜ್ಜಿಯ ಹೆಸರು ಶಾರದೆ ಎಂದೇ ಇರುವುದರಿಂದ ನಮಗೆಲ್ಲಾ ನಗೆ ತಡೆಯಲಾಗಲಿಲ್ಲ.

**ನಗರ ಗುರುದೇವ್ ಭಂಡಾರ್ಕರ್**





ಕಲೆ: ಗಣೇಶ ಆಚಾರ್ಯ

## ಮದುವೆಗಳೇ ಆಗಿಲ್ಲ

ಕ್ಷೇತ್ರ ಶಿಕ್ಷಣಾಧಿಕಾರಿಯೊಬ್ಬರು ಇತ್ತೀಚೆಗೆ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದಾಗ ನಡೆದ ಘಟನೆ. ಶಾಲೆಯ ಅತ್ಯುತ್ತಮ ಮೂಲಭೂತ ಸೌಲಭ್ಯ ಮತ್ತು ಶಿಕ್ಷಕರ ಕ್ರಿಯಾಶೀಲತೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಾ, 'ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ಒಂದನೇ ತರಗತಿಗೆ ದಾಖಲಾತಿ ಇಷ್ಟೊಂದು ಕಡಿಮೆ ಇದೆ?' ಎಂದಾಗ ಶಿಕ್ಷಕಿಯೊಬ್ಬರು, 'ಏನ್ಮಾಡೋದು ಸರ್, ಕಳೆದ ಏಳೆಂಟು ವರ್ಷಗಳಿಂದ ಈ ಊರಲ್ಲಿ ಮದುವೆಗಳೇ ಆಗಿಲ್ಲ' ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಿಬ್ಬಂದಿ ನಗು ತಡೆಯಲಾರದೆ ಜೇಪೇರಿ ಹೊರಟರು.

**ಗೊಂಡೇದಹಳ್ಳಿ ಜೇವಿ**